

ದಯರವಿ ಪ್ರಕಾಶನ : ವಾಣೀವಿಲಾಸಪುರಂ : ಮೈಸೂರು ೨

ವಾಲ್ಮೀಕಿಯ ಭಾಗ್ಯ

ಕುವೆಂಪು

ಉದಯರವಿ ಪ್ರಕಾಶನ
ವಾಣೀವಿಲಾಸಪುರಂ
ಮೈಸೂರು-೨

ಮೊದಲನೆಯ ಮುದ್ರಣ : ೧೯೩೧
ಉದಯರವಿಯಿಂದ ಎರಡನೆಯ ಮುದ್ರಣ : ೧೯೬೯
ಮೂರನೆಯ ಮುದ್ರಣ : ೧೯೮೪

ಬೆಲೆ : ರೂ. ೨-೫೦

ಮುದ್ರಕರು : ಜಿ. ಎಸ್. ನಾಗೇಂದ್ರ
ಕರ್ನಾಟಕ ಪ್ರೆಸ್, ಬಜ್ಜಣ್ಣ ಲೇನ್, ಚಾಮರಾಜಪುರಂ
ಮೈಸೂರು ೫೭೦ ೦೦೪

ವಿಜ್ಞಾಪನೆ

ಶ್ರೀರಾಮಚಂದ್ರನ ಪಿಸುಣ್ಗೆ ಕಿವಿಗೊಟ್ಟ ಕಟ್ಟಾಣತಿಯಂತೆ ಸೌಮಿತ್ರಿ ಗರ್ಭಿಣಿಯಾಗಿದ್ದ ಸೀತಾಮಾತೆಯನ್ನು ಅರಣ್ಯದಲ್ಲಿ ಬಿಟ್ಟು ಹೋಗುವ ಹೃದಯವಿದ್ರಾವಕವಾದ ಸನ್ನಿವೇಶವನ್ನು ಚಿತ್ರಿಸಲು ಈ ದೃಶ್ಯ ಪ್ರಯತ್ನ ಮಾಡಿದೆ. ಲಕ್ಷ್ಮೀಶನು ಪದ್ಯದಲ್ಲಿಯೂ ಮುದ್ದಣನು ಗದ್ಯದಲ್ಲಿಯೂ ಈ ಸನ್ನಿವೇಶವನ್ನೆ ಎಷ್ಟು ಸರಸಪ್ರೌಢವಾಗಿ ಬರೆದಿದ್ದಾರೆ ಎಂಬುದು ಪ್ರಸಿದ್ಧ ವಾಗಿದೆ. ಆ ಕವಿಗಳ ಸರಸ ಪ್ರೌಢಿಮೆ ಅನನುಕರಣೀಯವಾದುದಾದರೂ ಅವರನ್ನು ಆಶ್ರಯಿಸಿ ಅನುಸರಿಸಿಯೆ ಈ ದೃಶ್ಯ ರಚಿತವಾಗಿದೆ. ಕೆಲವೆಡೆ ಗಳಲ್ಲಿ ಆ ಕವಿಗಳ ಮಾತು ಹಾಗೆಹಾಗೆಯೆ ಪಾತ್ರಗಳ ಬಾಯಿಂದ ಹೊರ ಹೊಮ್ಮುವುದನ್ನು ಓದುಗರು ಕಾಣಬಹುದು.

ಹಿಂದಿನ ಆ ಕವಿವರ್ಯರು ಶ್ರೀರಾಮನು ಸೀತೆಯನ್ನು ತೊರೆದುದಕ್ಕೆ ಹಲವು ಕಾರಣಗಳನ್ನು ಹೇಳಿರುವರು. ಲೋಕಾಪವಾದದ ನಿವಾರಣೆ, ರಘುಕುಲದ ಕೀರ್ತಿಸಂರಕ್ಷಣೆ, ಶ್ರೀರಾಮನ ಸ್ವಕೀರ್ತಿಪಾಲನೆ ಮೊದಲಾದವು. ಆ ಕಾರಣ ಗಳಲ್ಲಿ ಕೆಲವು ಕುಂಟು ; ಮತ್ತೆ ಕೆಲವು ಕುರುಡು ; ಎಂಬುದು ಈ ಕಾವ್ಯ ಗಳಲ್ಲಿಯೆ ರಾಘವಾನುಜರಾಡುವ ಪ್ರತಿವಾದದಿಂದ ತಿಳಿದುಬರುತ್ತದೆ. ಈ 'ದೃಶ್ಯ'ದಲ್ಲಿ ವಾಲ್ಮೀಕಿಯ ಭಾಗ್ಯವನ್ನು ಕಾರಣವಾಗಿ ಇಟ್ಟುಕೊಂಡಿದೆ. ಅದರಿಂದಲೆ 'ದೃಶ್ಯ'ಕ್ಕೆ ಆ ಹೆಸರನ್ನೆ ಕೊಟ್ಟಿದೆ. ಈ ಕಾರಣವನ್ನು ಹೇಳಿ ದುದರಿಂದ ಸೀತಾಪರಿತ್ಯಾಗದ ಸಮಸ್ಯೆ ಪರಿಹಾರವಾಗದಿದ್ದರೂ ಅದು ಭಾವ ಪೂರ್ಣವಾಗುವುದೆಂದು ಬರೆದವನ ಆಶಯ.

ಕುವೆಂಪು

ವಾಲ್ಮೀಕಿಯ ಭಾಗ್ಯ

ಪಾತ್ರಗಳು

ಲಕ್ಷ್ಮಣ
ಸೀತೆ
ವಾಲ್ಮೀಕಿ

ವಾಲ್ಮೀಕಿಯ ಭಾಗ್ಯ

ಗಂಗಾತೀರದ ಅರಣ್ಯ. ಸೀತಾದೇವಿ ಗರ್ಭಿಣಿಯಾದರೂ ಸಡಗರದಿಂದ ಬೇಗನೆ ನಡೆದು ಬರುತ್ತಾಳೆ. ಆಯಾಸವಾದರೂ ಉತ್ಸಾಹ ಭರದಲ್ಲಿ ಆಕೆಗೆ ಅದು ತಿಳಿಯುವುದಿಲ್ಲ.

ಸೀತೆ

ಸೌಮಿತ್ರಿ,
ಈ ಬನದ ಪಸುರ್ಗತ್ತಲೆ ಕಣ್ಗೆನಿತು ತಣ್ಣಗಿದೆ !
ಬಾನ ನಡುನೆತ್ತಿಯೊಳು
ನಡುವಗಲ ನೇಸರು ನಿಶ್ಚಲಂ ಪೊಳೆದಿರ್ದೊಡಂ
ಬಿಸಿಲ ಕಾಯ್ಪಿಲ್ಲಿ ತೋರದಿದೆ.
ಈ ಹೆಮ್ಮರಗಳೇಂ
ತಳಿರ್ಗೊಡೆವಿಡಿದು ನಿಂದಿಹವು
ನಮಗೆ ನೆಳಲೀಯಲೆಂಬಂತೆ !—
ಅಲ್ಲಿ ನೋಡಯ್ !—ತನ್ನ ನೀರೆದೆಯೊಳು
ತೆರೆತೆರೆಗೆ ಪರ್ಬಿ ಮಾರ್ಪೊಳೆದು ಮಿಂಚುತಿಹ
ರವಿಯ ಬಿಂಬಮಂ ಪೊತ್ತು
ತುಂಬು ಬಸಿರಿಂ
ಇಕ್ಕೆಲದ ಬನಸಿರಿಯ ನಡುವೆ ಮೆಲ್ಲಮೆಲ್ಲನೆ ಪರಿವ
ಗಂಗೆಯೇಂ ಕಣ್ಗೆಡ್ಡಮಾಗಿಹಳು !
ಆಹ !—
ಮುಂಗಾಲ್ಗಳಂ ನೆಲದೊಳೂರಿ ಪಿಂಗಾಲ್ಗಳಿಂ ನಿಂತು
ಮೋರೆಯಂ ನೀರ್ಗಿಟ್ಟು ನೀರ್ ಕುಡಿವ
ಆ ಹರಿಣಿಯೇಂ ಚೆಲ್ವಂ ಮೆರೆದಪುದು !
ಅದರೆಡೆಯೊಳಿಹ ಮರಿಯೇಂ ಬಾಲವನೊಲೆದು ಚಿಮ್ಮುತಿದೆ !

[ಹಿಂತಿರುಗಿ ನೋಡಿ ಲಕ್ಷ್ಮಣನು ದೂರದಲ್ಲಿ ಬರುವುದನ್ನು ಕಂಡು]

ಅಯ್ಯೊ, ನಾನಾರೊಡನೆ ನುಡಿಯುತಿಹೆನಿಂತು ?—(ಗಟ್ಟಿಯಾಗಿ)
ಇದೇನಯ್, ಸೌಮಿತ್ರಿ, ಹಿಂದುಳಿದೆ ?
ಹಾದಿಯೊಳು ಕಲ್ಲುಮುಳ್ಳುಗಳಿಲ್ಲ ;
ತಗ್ಗುದಿಣ್ಣೆಗಳಿಲ್ಲ ;
ಸಮತಟ್ಟಾಗಿರ್ಪುದೀ ಬನಂ.

[ಲಕ್ಷ್ಮಣನು ಬಿಲ್ಲು ಬತ್ತಳಿಕೆಯೊಡನೆ ಬರುವನು. ಒಂದು ದೊಡ್ಡ ಗಂಟನ್ನು ಹೊತ್ತಿರುವನು. ಸೀತೆ ಮುಗುಳ್ನಗೆಯಿಂದ]

ಲೇಸಾಯ್ತು ! ನಿಡುಲೇಸಾಯ್ತು !
ಹೆಣ್ಣಾದ ನಾನೆ ಸಾಗಿಬರೆ,
ಗಂಡುಗಲಿ ನೀನೆ ನಡೆಯಲಾರದಿರೆ, ನಾಣಲ್ತೆ ?
ಇರು, ಇರು ; ಊರ್ಮಿಳೆಗಿದನೊರೆದಪೆಂ :
ನಿನ್ನಿನಿಯಂ, ನಚ್ಚಿನ ನಿನ್ನಿನಿಯಂ
ಪೆಣ್ಣೊಡಗೂಡಿ ನಡೆಯಲಾರದೆ
ಬಸವಳಿದು ಪಿಂದಾದಂ ಎಂದು !

ಲಕ್ಷ್ಮಣ

(ಬಹಳ ಪ್ರಯತ್ನದಿಂದ ಮುಗುಳ್ನಗುತ್ತ)

ತಾಯೆ, ಬೇಗದಿಂ ನಡೆದು ಬರುತಿರೆ
ಹಳುವದೊಳಾವುದೊ ಬಲ್ಮಿಗಂ ಕಣ್ಗೆ ಮಿಂಚಿದುದು.
ಅದೇನೆಂದು ನೋಳ್ಪನಿತರೊಳೆ ನೀಂ ಮುಂದಾದಿರಿ.
ಅದಲ್ಲದೆ, ನಿಮ್ಮೀ ಕರಂಡಂ—(ಅದನ್ನು ನೋಡಿ)
ಬಹುಭಾರಮಾಗಿರ್ಪುದು—
ಇದರೊಳೇನಿರ್ಪುದೊ ನಾನರಿಯೆಂ.

ಸೀತೆ

(ನಸುನಗುತ್ತ)

ಎಂದಿನಿಂದಾದುದ್ಯೆ ನಿನಗೀ ಕೋಮಲ ಸ್ವಭಾವಂ ?
ವನವಾಸದಂದು ಎಮ್ಮೆಲ್ಲರ ಪೊರೆಯಂ

ನೀನೊರ್ವನೆ ಆಸರುಬೇಸರಿಲ್ಲದೆ ಪೊತ್ತು
ಜಿಂಕೆಯಂದದಿ ಚಿಮ್ಮುತಿರ್ದುದಂ ನಾನೆ ಕಂಡಿರ್ಪೆಂ.
ಲಂಕೆಯೊಳಂದು ಯುದ್ಧಕಾಲದೊಳು
ರಕ್ಕಸರೆಸೆದ ಬಲ್ಗುಂಡುಗಳೆಲ್ಲಂ
ಎನ್ನೀ ಕರಂಡಕಂ ಲಘುತರವಾಗಿರ್ದುವೇಂ ?—

(ಆಲೋಚಿಸಿದಂತೆ)

ಓಹೋ ! ಈಗಳರಿತೆಂ !
ಅರಮನೆಯ ವಾಸಂ,
ಮೇಣೂರ್ಮಿಳೆಯ ಲಲಿತ ಸಹವಾಸಂ
ನಿನ್ನನಿಂತುಗೈದಿರ್ಪುದೆ ಸಾಜಂ !

ಲಕ್ಷ್ಮಣ

ಎನ್ನನಣಕಿಸದಿರಿಂ, ತಾಯೆ ;
ಕರಂಡದೊಳೇನಿರ್ಪುದೊ ಅದನರಿಯಲೆಂದಾಟಿಸಿ
ಕುತೂಹಲದಿಂ ಕೇಳ್ದೆನಲ್ತೆ !

ಸೀತೆ

ಅದರೊಳೇನಿರ್ಪುದೈ, ಸೌಮಿತ್ರಿ ?
ತಪೋವನದ ಋಷಿಗಳ್ಗೆಂದುಂ ಮುನಿಪತ್ನಿಯರ್ಗೆಂದುಂ
ಪರಿಮಳದ್ರವ್ಯಂಗಳಂ ದಿವ್ಯಾಂಬರಂಗಳಂ
ಕೈಗಾಣ್ಕೆಯಾಗಿಟ್ಟಿಹೆಂ.
ಆಶ್ರಮದ ಕಿರುವರೆಯದ ನಲ್ಗುವರರ್ಗೆಂದು
ಒಂದೆರಳ್ಪಗೆಯ ನಲ್ಲುಣಿಸನಿಟ್ಟಿಹೆಂ.
ಮತ್ತೇನೊಂದುಮಿಲ್ಲಂ !—ಆಃ ! ಮರೆತಿರ್ದೆಂ !
ಎನ್ನಿನಿಯನಡಿಗಳ ಚೆಂಬೊನ್ನ ಪಾವುಗೆಗಳಿಹವಲ್ಲಿ !

(ಲಕ್ಷ್ಮಣನು ಕರಂಡಕ್ಕೆ ನಮಸ್ಕಾರ ಮಾಡುವನು)

ನಿನಗದು ಭಾರಮಾಗಿರ್ದೊಡೆ ಇತ್ತ ನೀಡು ;
ನಾನೆ ಕೊಂಡೊಯ್ವೆಂ !

ಎಂತಾದರುಂ ನೀನೆನ್ನ ಸಮುಕೆ ನಡೆದೊಡೆ
ಅದೆ ನನಗೆ ಸೌಭಾಗ್ಯಂ !—
ಪುರುಷರೆಲ್ಲಗ್ಗೆ ಸಮರಮೆನೆ ಕಾಲ್ಗಳೋಟಂ !
ಮಿಕ್ಕೆಲ್ಲದರೊಳು ನೀಂ ಮಂದಗಾಮಿಗಳೆ ದಿಟಂ ! (ಕೈನೀಡೆ)

ಲಕ್ಷ್ಮಣ

ತೆಗೆ ತೆಗೆ, ತಾಯೆ ; ಸಾಲ್ಗುಮೀ ಪರಿಹಾಸ್ಯಂ !
ಭಕ್ತಂಗೆ ದೇವರಡಿದಾವರೆಗಳ್ ಭಾರಮೇ ?

ಸೀತೆ

ಅಂತಾದೊಡೆ ನೀಂ ಪಿಂತುಳಿಯಲಾಗದು.

ಲಕ್ಷ್ಮಣ

ಅಪ್ಪುದಪ್ಪುದು, ನಾನಿಂ ಪಿಂತುಳಿಯೆಂ. (ತನ್ನಲ್ಲಿಯೆ)
ಅಯ್ಯೋ ರಾಘವೇಶ್ವರಂ ಕೋಮಲೆಯ ಕೊಲೆಗೆಲಸಕೆ
ಎಂತೆನ್ನಂ ಬೆಸಸಿದನೊ ?
ನಿಷ್ಠುರದೊಳಿಂತೀ ಕೃತ್ಯಮೆಸಗುವೆನೊ ?
ಕರುಣೆಯಿಲ್ಲದೀ ಬಾಳು ಪಾಳ್ಪೋಗಲಿ !
ತನ್ನ ಕೀರ್ತಿಯ ಕೋಡಿನೇಳ್ಗೆಗೆಂದು
ನಿರಪರಾಧಿನಿಯಂ ಬಲಿಗೊಡುವರೇ ?
ಗೂಬೆ ನಿಂದಿಸಿತೆಂದು ಬೆಳ್ದಿಂಗಳಂ ಪಳಿವರೇ ?
ಪಾಳಗಸನೊರ್ವಂ ಮುಳಿಸಿನಿಂ ಮುಂಗಾಣದೆ ಪಳಿದನೆಂದು
ಲೋಕಮಾತೆಯಂ ಅಡವಿಗಟ್ಟುವುದಾವ ಧರ್ಮಂ ? (ನಿಡುಸುಯ್ದು
ಧರ್ಮದ ಪೆಸರಿನೊಳೆ ಲೋಕದೊಳೆನಿತಧರ್ಮಮಂ ಗೈವರ್ !

ಸೀತೆ

(ಎರಡು ಹೆಜ್ಜೆ ನಡೆದು)

ಮೈದುನಾ, ನೋಡಲ್ಲಿ : ಪೂತ ಆ ಚೆನ್ನಸುಗೆ
ಸಿಂಗರಿಸಿದ ಮದುಮಗಳಂತೆ ರಂಜಿಸುತ್ತಿದೆ !
ನೋಡು, ಆ ಕೊಂಬೆಯಿಂ ಜೋಲುತಿಹ ಹೆಜ್ಜೇನು ಹುಟ್ಟಿ

ಕರ್ದಿಂಗಳ ಫಲಕದಂತೆ
ಎನಿತು ಮನೋಜ್ಞ ಭೀಷಣಮಾಗಿದೆ!

ಲಕ್ಷ್ಮಣ

(ಗಮನಿಸದೆ ತನ್ನೊಳಗೇ)

ಆರೆಂದುದನುಂ ಗಣನೆಗೆ ತಾರದೆ
ತನ್ನ ಚಲಮೇ ನನ್ನಿಯೆಂದು ಸಾಧಿಸಿ
ಎನ್ನನೀ ಕಡುಗೆಯ್ಮೆಗೆ ನೂಂಕಿದಂ.
ಎಂತೀ ಸಿಡಿಲಸುದ್ದಿಯನೊರೆವೆಂ, ಮಾತೆಗೆ?
ಅಯ್ಯೋ ವಿಧಿಯೇ,
ಲಂಕೆಯೊಳೆನ್ನಂ ಕೊಲ್ಲದೆ ನೀನಿದಕೆಂದೆ ಉಳುಹಿದೆಯಾ?
ಪದಿನಾಲ್ಕು ಬರಿಸಮುಂ ನಾನಾರಂ
ಜಗನ್ಮಾತೆ ಎಂದರಿತು ಸೇವೆಗೈದೆನೋ
ಆ ಪುಣ್ಯಜನನಿಯಂ
ಇಂದೆಂತು ನಟ್ಟಡವಿಯೊಳಿಟ್ಟು ಪೋಗಲಿ?

ಸೀತೆ

(ಹಿಂತಿರುಗಿ)

ಇದೇನ್ನೈ, ಸೌಮಿತ್ರಿ, ನಿನ್ನೀ ತೆರಂ?
ನಡೆಯಲೊಲ್ಲೆ; ನುಡಿಸಿದರುಂ ನುಡಿಯಲೊಲ್ಲೆ.
ನುಡಿದರುಂ ಹುಂಕಾರಮೆ ಪಡಿನುಡಿಯಾಗಿರ್ಪುದು!
ಎನ್ನೊಡನೈತರಲು ನಿನಗಿಚ್ಚೆಯಿಲ್ಲೇಂ? (ನಸುಮುನಿಸಿನಿಂದ)
ಅರಮನೆಯೊಳೆ ನೀನಿಂತಾಡಿರ್ದಡೆ
ಭರತಶತ್ರುಘ್ನರೊಳಾರಾನುಮಂ ಕರೆತರುತಿರ್ದೆಂ.
ನಡುಗಾಡಿನೊಳು ನಿನ್ನಿಂತೆಸಪಂ ತರಮಲ್ತು!

ಲಕ್ಷ್ಮಣ

(ಹನಿಗಣ್ಣಾಗಿ)

ಜನನೀ, ಕೋಪಿಸದಿರಿಂ!

ಸೀತೆ

(ಕರುಣದಿಂದ ಕರಗಿ)

ಏನೈ ಕಂದಾ, ಕಣ್ಣ್ ಹನಿಯಾಡುತಿದೆ!
ನಿನ್ನಿರವಿಂದೇಕೊ ಸೋಜಿಗವಾಗಿರ್ಪುದು!

ಲಕ್ಷ್ಮಣ

(ಸುತ್ತನೋಡಿ)

ದುಂಬಿಗಳಾಟದಿಂ ಕೆದರ್ದ ಪೂಗಳ ಪರಾಗಂ
ಕಣ್ಗೆ ಬಿಳ್ದುದು. (ಕಣ್ಣುಜ್ಜಿಕೊಳ್ಳುತ್ತಾ)
ಬಟ್ಟೆದಪ್ಪಿದೆನೊ ಏನೊ ಎಂದು ಕಳವಳಂ!

ಸೀತೆ

(ಸಮ್ಮತಿಸಿ)

ಅಹುದಹುದು, ಸೌಮಿತ್ರಿ.
ಎನಗಾಗಳೆಯೆ ಸಂಶಯಂ ತಲೆದೋರ್ದುದು.
ಆದೊಡಂ ನೀಂ ಬನಬಟ್ಟೆಯರಿತವಂ ಎಂದು
ಮಾತಾಡದೆಯೆ ಮುಂದುವರಿದೆಂ.—
ಈ ಕಾಡು ಅಟನಕಸದಳವಾಗಿರ್ಪುದು.—
ಪುಣ್ಯಾಶ್ರಮದ ಜಟೆಗಳಂ ಕಾಣೆಂ;
ವಲ್ಕಲವನುಟ್ಟ ಮುನಿವಧುಗಳ ಸುಳಿವಿಲ್ಲ;
ವಟುಗಳೊರ್ವರುಂ ಕಾಣಿಸರು;
ಶ್ರುತಿಘೋಷಂ ಕೇಳಿಸದು;
ಗಾಳಿಯೊಳೇಳ್ವ ಹೋಮಧೂಮು ಗೋಚರಿಸದು!—
ನಾನಂದು ಕಂಡ ಮುನಿಪೋತ್ತಮರ ವನದೆಡೆಗಳೆಲ್ಲಿ?
ಸಿದ್ಧಾಶ್ರಮಂಗಳ ಮಂಗಳ ಸ್ಥಳಗಳೆಲ್ಲಿ?
ಸುಹವಿಗಳ ಕಂಪೊಗೆದು ಪೊಗೆಯೇಳ್ವ
ಆ ಚೆಲ್ವಿನೆಲೆವನೆಗಳ ಸುಳಿವೆಲ್ಲಿ?
ಎನಗಂದು ಪರಿಚಿತಮಾದ ವಾದವೇದಧ್ವನಿಗಳೊಂದುಂ
ಈ ಎಡೆಯೊಳೆಲ್ಲಿಯೂ ಕೇಳಿಸದು!

ಅಯ್ಯೋ!
ದಾರುಣದ ಕಟ್ಟಡವಿದಿಗಿಲ್ಲಿಗೇಕೈತಂದೆ,
ತಂದೆ, ಸೌಮಿತ್ರಿ?

ಲಕ್ಷ್ಮಣ

(ತೋರುತ್ತ)

ತಾಯೆ, ಈ ದೆಸೆಯೊಳೇನಾದರುಂ
ದಾರಿಯ ಕುರುಪು ತೋರ್ಪುದೊ, ನೋಳ್ಪಂ, ಬನ್ನಿಂ.
(ಸ್ವಲ್ಪ ದೂರ ಹೋಗಿ ತನ್ನಲ್ಲಿಯೆ)
ಅಯ್ಯೊ ಆನೀಗಳೇಗೈವೆಂ?
ಎಂತುಸಿರ್ವೆಂ ಆ ನಿಷ್ಠುರದ ವಿಷವಾರ್ತೆಯಂ?
ಇನ್ನೆನಿತು ಪೊಳ್ತು ಈ ಗರ್ಭಿಣಿಯಾದೆನ್ನ ಮಾತೆಯಂ
ಪುಸಿವೇಳ್ದು ಸುತ್ತಿಸಲಿ!
ಹಾ ವಿಧಿ; ಹಾ ರಾಮಚಂದ್ರಾ!

ಸೀತೆ

(ಬೆಚ್ಚಿ)

ರಾಮಚಂದ್ರಾ! ರಾಮಚಂದ್ರಾ!

ಲಕ್ಷ್ಮಣ

ಏನಾದುದೌ, ತಾಯೆ?

ಸೀತೆ

ಆಲಿಸು, ಸೌಮಿತ್ರಿ, ಬಳ್ಳೊರಲುತಿದೆ!—
ನೋಡಲ್ಲಿ, ಕುಳ್ಳಿರ್ದ ಮಿಗಮೆದ್ದು ಮಾರ್ಗಮಂ ದಾಂಟುತಿದೆ!—
ಅಯ್ಯೋ, ಎನ್ನ ಬಲದ ಕಣ್ಣದಿರುತಿದೆ!
ದುರ್ನಿಮಿತ್ತಂಗಳಂ ನೋಡಿ ಎನ್ನೆರ್ದೆ ಬೆದರುತಿದೆ!

ಲಕ್ಷ್ಮಣ

(ವ್ಯಸನದಿಂದ)

ಬೆದರದಿರಿಂ, ತಾಯೆ.
ಶ್ರೀರಾಮನೆಮ್ಮೆಲ್ಲರಂ ಕಾಪಾಡುವಂ.

ಸೀತೆ

ದಿಟಮದು, ಮೈದುನಾ.
ಎನಗೆನ್ನ ಕೇಡೊಳಳುಕಿನಿತಿಲ್ಲ.—
ಶ್ರೀರಾಮಚಂದ್ರಂ ಸೊಗದಿನಿರ್ದಪನೇ?

ಲಕ್ಷ್ಮಣ

ತಾಯೆ, ಸೈರಣೆ!
ಸರ್ವರಕ್ಷಕಂಗೆ ಕೇಡೆಂದರೇನು?
ರಘುಕುಲೇಶಂ ಅರಮನೆಯೊಳಾನಂದದಿಂದಿರ್ಪಂ.

ಸೀತೆ

ಶ್ರೀರಾಮಚಂದ್ರನಾಯುಷ್ಯಂ ಸುದೀರ್ಘಮಕ್ಕೆ!—
ಅಯೋಧ್ಯೆಯ ಜನನಿಕರಕೇನಾದರುಂ
ಅಮಂಗಳಂ ಪ್ರಾಪ್ತಮಾದುದೇ?

ಲಕ್ಷ್ಮಣ

ಅದೆತ್ತಣ ಸಂದೇಹಂ?
ರಾಮನಾಳ್ವಿಕೆಯೊಳಾರ್ಗುಂ ಕೇಡಿಲ್ಲಂ;
ಇಂತಿರೆ ಅಯೋಧ್ಯೆಗೆಲ್ಲಿಯ ಅಮಂಗಳಂ?

ಸೀತೆ

ಮೈದುನಾ, ಮತ್ತಾರಿಗೀ ಅಮಂಗಳ ಸೂಚನೆ?

ಲಕ್ಷ್ಮಣ

(ನಿಡುಸುಯ್ದು)
ಬಟ್ಟೆಗೆಟ್ಟು ನಿಮ್ಮನೀ ವಿಪಿನಕೊಡಗೊಂಡು
ಬಂದಿರ್ಪೆನಗೆ! (ತಲೆಬಾಗುವನು)

ಸೀತೆ

ಮರುಗದಿರು, ಕಂದಾ.
ಶ್ರೀರಾಮಂಗೆ ನಚ್ಚಿನ ಸಹೋದರಂ ನೀಂ;
ನಿನಗೆಲ್ಲಿಯ ಅಶುಭಂ?—(ಚಿಂತೆಯಿಂದ)
ನಿನಗಲ್ಲವಿಾ ದುಶ್ಶಕುನಂ; ನಿನಗಲ್ಲಂ!— (ದುಃಖದಿಂದ)

ಎನಗೆ! ಹತಭಾಗ್ಯೆಯಾದ ಎನಗೆ!
ಪತಿಪಾದಮಂ ತೊರೆದು ಬನಕೈತಂದೆನಗೆ!
ಅಯ್ಯೋ
ಪಾವನಕೆ ಪಾವನಂ, ಮಂಗಳಕೆ ಮಂಗಳಂ
ಆದಾವನ ಚರಿತ್ರಸಾವಂಗಳೋ
ಆ ರಾಘವನೆ ಜೀವೇಶನಾಗಿರಲ್ಕೆ
ಆತನಂ ಪ್ರಿಯನಗಲ್ದು ನಾಂ ಬಂದ ಬಳಿಕ
ಈ ವನದೊಳಿನ್ನು ಪುಣ್ಯಾಶ್ರಮಂ ಗೋಚರಿಪುದೇ?
ತಾವರೆಯುನುಳಿದಾರಡಿಗೆ ಬೊಬ್ಬುಳಿಯ ಪೂವಿನೊಳ್
ಮಧುವುಂಟೇ?— ಪೇಳ್ವೈ, ಸೌಮಿತ್ರಿ. (ಮರುಗುತ್ತಾಳೆ)

ಲಕ್ಷ್ಮಣ

(ಸ್ವಗತ)

ಅಯ್ಯೋ ಇನ್ನೇನಂ ನೆಗಳ್ದಪೆಂ?
ಕಠೋರ ಸತ್ಯಮನೆಂತುಸಿರ್ದಪೆಂ?
ಎಂತೀ ಕೋಮಲೆಯಂ ಕೊಲೆಗೆಯ್ವೆಂ?—
ಹಾ ರಾಘವೇಂದ್ರಾ, ಜಗನ್ಮಾರ್ಗದರ್ಶಕಾ ಬಟ್ಟೆದೋರ್ವೈ!
ಸೀತೆಯಂ,
ಜಗನ್ಮಾತೆಯಂ,
ಸರ್ವಲೋಕಪುನೀತೆಯಂ
ನಾನೆಂತು ಕಾಡುಪಾಲ್ಗೆಯ್ವೆಂ?
ಆವ ಮೊಗದೊಳಯೋಧ್ಯೆಗೆ ಮರಳ್ದಪೆಂ?
ಅಯ್ಯೋ, ಜನಂಗಳೆಲ್ಲರುಂ ನನ್ನೆಡೆಗೆ ಕೈದೋರಿ,
"ನೋಡಿವನೆ ಸೀತೆಯುನಡವಿಯೊಳ್ ಬಿಟ್ಟವಂ;
ತಾಯಂ ಕೊಲೆಗೈದವಂ;
ನಿಷ್ಕರುಣಿ!"
ಎಂದಾಡಿಕೊಂಬುದಂ ಕೇಳ್ದು
ಹರಣವನೆಂತು ಪೊರೆದಪೆಂ?

ಸೀತೆ

ಓ ಲಕ್ಷ್ಮಣಾ,
ನಾನಿನ್ನು ನಡೆಯಲಾರೆನೈ. (ತೋರುತ್ತ)
ನೋಡು, ನೋಡಯ್ :
ಕಲ್ಲೆಡಹಿ ಮುಳ್ನಾಂಟಿ ಕಾಲಿಂ ಬಸಿದ ನೆತ್ತರಂ !—
ಬಸಿರ ಬೇನೆಯಿಂ ಕಡುನೊಂದೆಂ !
ಅಯ್ಯೋ ಕೆಟ್ಟೆಂ !
ಮುಂತೇನಯ್ ತನಗೆ ಬಟ್ಟೆ ?
ಮಾತಾಡಯ್ !
ಏಕಿಂತು ಕೆಮ್ಮನಿರ್ದಪೈ ?

ಲಕ್ಷ್ಮಣ

(ಬಿಕ್ಕಿಬಿಕ್ಕಿ)

ಮಾತೆ,
ಬನಕೆ ಪೋಪೆನೆಂದು ಕಾಂತನನೇತರ್ಕೆ ಬೇಡಿದಾ ?
ಎನ್ನನೇತರ್ಕೆ ಇಂತಪ್ಪ ಘೋರಕೇಡುಮಾಡಿದಾ ?—
ಹಾ ವಿಧಿ !
ರಾವಣನಿಂ ತಪ್ಪಿಸಿ ಲಕ್ಷ್ಮಣನಿಂ ಕೊಲಿಸಲೆಂದೇ
ರಾಮಾಯಣವನಾಗಿಸಿದಯ್ ?

ಸೀತೆ

ಮೈದುನಾ, ಏಕೆ ರೋದಿಪಯ್ ?
ಅಯೋಧ್ಯೆಗೆ ಮರಳುವಂ ;
ಪಿಂತಿರುಗು ;
ಬಂದ ಬಟ್ಟೆಯೊಳೆ ಪೋಪಂ.

ಲಕ್ಷ್ಮಣ

ಪಿಂತಿರುಗುವುದೆಂತು, ಜನನೀ ?

ಸೀತೆ

ಏಕೈ ? ಬಂದ ದಾರಿಯಂ ಮರೆತೆಯೋ ?

ಲಕ್ಷ್ಮಣ

ತಾಯೆ, ನಾನುರು ಚಂಡಾಲಂ !

ಸೀತೆ

ಚಿಃ ತೆಗೆ, ಕಂದಾ ! ನಿನ್ನನ್ನರ್ಗೆ ತಗದಾತ್ಮನಿಂದೆ !

ಲಕ್ಷ್ಮಣ

ಅಯ್ಯೋ ನೀನರಿಯೈ, ತಾಯೆ.
ನಾನುರು ಚಂಡಾಲಂ !
ಮಹಾಪಾಪಿ !
ಮಾತೃಘಾತಕಂ !

ಸೀತೆ

ಬೇಡ, ಬೇಡ, ಈ ಅಮಂಗಳದ ನುಡಿ !
ರಾಮ, ರಾಮ !
ಸುಮಿತ್ರಾದೇವಿ ಚಿರಾಯುವಕ್ಕೆ !

ಲಕ್ಷ್ಮಣ

ಮಾತೆ ಅಯೋಧ್ಯೆಯೊಳು ಸುಖದಿನಿರ್ಕೆ !

ಸೀತೆ

ಮತ್ತೇನ್ನೆ ನೀನಾಡುವುದು ?

ಲಕ್ಷ್ಮಣ

ದೇವೀ, ನಾನಿಲ್ಲಿ ಕೊಲೆಯಾದಪೆಂ
ನೀಂ ಪಿಂತಿರುಗಿಂ ?

ಸೀತೆ

ಇದೇನಯ್, ಸೌಮಿತ್ರಿ ?
ನಿನಗೇಂ ಪುರ್ಚೆ ?

ಲಕ್ಷ್ಮಣ

ಅಹುದಹುದು, ಪುರ್ಚು ಪಿಡಿದಿರ್ಪುದು !
ನಿಮ್ಮೊಡನೆ ನಾಂ ಮರಳಲಾರೆಂ !

ಸೀತೆ

ಮತ್ತೆತ್ತಣ್ಗೆ ಪೋದಪ್ಪೆ ?

ಲಕ್ಷ್ಮಣ

ನಾನೀ ಎಡೆಯೊಳೆ ಮಡಿವೆಂ ಶಸ್ತ್ರಮಂ ಪಾಯ್ದು !

ಸೀತೆ

ತೆಗೆತೆಗೆ ! ಎನ್ನಾಣೆ ! ಮರಳು, ಪಿಂತಿರುಗು !

ಲಕ್ಷ್ಮಣ

ನಾವಿರ್ವರುಂ ಅಯೋಧ್ಯೆಗೆ ಮರಳಲಾಗದಾ !

ಸೀತೆ

ಅದೇಕೆ ?—ಮರೆತೊಡೇಂ ?—
ಮರಳಿ ಬಟ್ಟೆಯನರಸಿ ಪೋಗುವಂ,
ಬಾ, ಕಂದಾ !

ಲಕ್ಷ್ಮಣ

ಅಯ್ಯೋ, ಈ ಪಾಪಿಯಂ 'ಕಂದಾ' ಎನ್ನದಿರಿ !

ಸೀತೆ

ಕಂದಾ, ಪುರ್ಚಂ ಪಿಡಿಸದಿರೆನಗುಂ !

ಲಕ್ಷ್ಮಣ

(ಗದ್ಗದದಿಂದ)

ನಾನಾಗಲಿ ನೀಮಾಗಲಿ
ಇರ್ವರೊಳೊರ್ವರೆಯೆ
ರಾಜಧಾನಿಯಂ ಮರಳಿ ಪುಗವೇಳ್ಕುಂ !

ಸೀತೆ

ಅದೇನೈ ?

ಲಕ್ಷ್ಮಣ

ರಾಘವೇಶ್ವರನ ಕಟ್ಟಾಣೆ !

ಸೀತೆ

ಕಂದಾ, ಬೆದರದಿರು.
ನಾನೊರೆದಪೆನೆಲ್ಲಮಂ ರಘುರಾಮಂಗೆ.—
ದಟ್ಟಡವಿಯೊಳು ಬಟ್ಟೆದಪ್ಪಿತು ;
ಮರಳ್ದೆವದರಿಂ ಎಂದು.—
ಆರಾದೊಡಂ ಗೈವರೇನಂ ಬಟ್ಟೆದಪ್ಪಿದವೋಲೆ ?
ನಿನ್ನದೇಂ ತಪ್ಪು?
ಶ್ರೀರಾಮನಾಗಿರ್ದೊಡಂ ಮರಳ್ದಿರುತಿರ್ದನೇ ?

ಲಕ್ಷ್ಮಣ

(ಸುಯ್ದು)

ಅಯ್ಯೋ ನಾನದನರಿಯೆಂ !
ನಾನಂತುಂ ಮರಳಲಾರೆಂ, ನಿಮ್ಮೊಡನೆ !

ಸೀತೆ

ಮತ್ತೇನಂ ಮಾಡುವೈ ? (ನಸುಸಿಡುಕಿ)
ಎನ್ನನಿಲ್ಲಿಯೆ ಬಿಟ್ಟು ನೀನೊರ್ವನೆ ಪೋಗು !

ಲಕ್ಷ್ಮಣ

ಹಾ ತಾಯೆ, ಶ್ರೀರಾಮನಂತಾಡದಿರಿ !

ಸೀತೆ

ಏನಾಡಿದಂ ರಾಮಚಂದ್ರಂ ?
ಪೇಳಯ್ !
ಎನ್ನೊಡನೇತರ್ಕಯ್ ಮುಚ್ಚುಮರೆ ?

ಲಕ್ಷ್ಮಣ

ಅಯ್ಯೋ, ನಾನೆಂತದನೊರೆವೆಂ,
ಆ ಕಠೋರವಾಕ್ಯಮಂ ? (ಮರುಗುತ್ತಾನೆ)

ಸೀತೆ

ಪೇಳಯ್, ಸೌಮಿತ್ರಿ ; ಎನ್ನಾಣೆ, ಪೇಳಯ್ !

ಲಕ್ಷ್ಮಣ

(ತಡೆತಡೆದು ಬಿಕ್ಕಿಬಿಕ್ಕಿ).

ದೇವೀ,
ನಿನಗಿನ್ನೆಗಂ ಪೇಳ್ದುದಿಲ್ಲಂ !—
ಅಪವಾದಮಾವರಿಸೆ ನಿನ್ನನೊಲ್ಲದೆ,
ರಘುಕುಲೋದ್ವಹಂ ಸೀವರಿಸಿ ಬಿಟ್ಟು
ಕಾಂತಾರಕ್ಕೆ ಕಳುಹಿ ಬಾ ಎಂದೆನಗೆ—
ನೇಮಿಸಿದೊಡೆ—
ಆ ವಿಭುವಿನಾಜ್ಞೆಯಂ ಮೀರಲರಿಯದೆ
ನಿಮ್ಮನೀ ವಿಪಿನಕೊಡಗೊಂಡು ಬಂದೆಂ !—

(ಸೀತೆ ಕಳವಳಗೊಂಡು ನೋಡುತಿರೆ)

ಇನ್ನೊಯ್ಯೊಯ್ಯನಾವಲ್ಲಿಗಾದೊಡಂ ಪೋಗಿಂ !—

ಸೀತೆ

ಅಯ್ಯೋ ಕೆಟ್ಟೆಂ ! (ಹಮ್ಮೈಸಿ ಬಿದ್ದು ಮೂರ್ಛೆ ಹೋಗುತ್ತಾಳೆ)

ಲಕ್ಷ್ಮಣ

ಹಾ ರಾಮ ! ಹಾ ರಾಮ !
ಮಾತೆಯಂ ಪೊರೆಯೈ !
ಕರುಣಾಕರ, ರಕ್ಷಿಸೈ ! (ಸೆರಗಿನಿಂದ ಗಾಳಿ ಬೀಸುತ್ತಾನೆ)
ಅಯ್ಯೋ
ರಾಮನ ಸೇವೆ ಸಂದುದೇ ಎನಗಿಂದು ?
ಇಂದಿಗೆ ಅಯೋಧ್ಯೆಯ ಋಣತೀರಿತೇ ಎನಗೆ ?—
ಓ ಜಗನ್ಮಾತೆ,
ಹೇ ತ್ರಿಲೋಕಪೂಜಿತೆ,
ಕೊಲೆಗಾರನಂ ಮನ್ನಿಸಾ !
ಕಣ್‌ಬಿಟ್ಟು ನೋಡಾ !—(ಅತಿಶಯ ಶೋಕದಿಂದ)
ಇಲ್ಲದಿರೆ, ಇಲ್ಲದಿರೆ,
ಆನೀಯೆಡೆಯೊಳೆ ಬಾಳ್ಗೊಲೆಯಾದಪೆಂ !
ನಿಶ್ಚಯಂ !

ಸೀತೆ

(ಮೆಲ್ಲನೆ ಕಣ್ದೆರೆದು ದೈನ್ಯದಿಂದ)

ಹಾ ಕಂದಾ! ಲಕ್ಷ್ಮಣಾ! ಅನಾಥೆಯಾದೆನ್ಯೆ!—
ರಘುರಾಮನುಂ ಪಿಸುಣ್ಗೆ ಕಿವಿಗೊಟ್ಟು
ಕವಡರಿಯದಬಲೆಯಂ ಬಲಿದೆತ್ತನೇ?—
ಹಾ ಕರುಣಾನಿಧಿ,
ಊರೊಳಗೆ ಮಾರಿಯೆಂದು
ಮನೆಮೋರಿಯಂ ಮಾರುಗುಡುವರೆ?—
ಆನಿಲ್ಲದೆಂತು ಅರೆಮನೆಯೊಳಿರುವೈ?
ಎಂತು ಪಟ್ಟಮಣೆಯನೇರುವೈ?—
ಹಾ ರಾಘವಾ, ನಿನ್ನಡಿಗಳಾಣೆ!
ಎನ್ನೊಳು ಕೊರತೆಯಿರೆ ಮನ್ನಿಸಿ ಕಾವುದೈ;
ಕೈ ಮುಗಿದು ಬೇಡುವೆಂ.—
ಸೌಮಿತ್ರಿ,
ಕೊಯ್ಯಲೊಲ್ಲದೆ ಕೊರಲಂ ಇಂತುಟೆನ್ನಂ ಬಿಡಲು
ಮಾಡಿದಪರಾಧಮುಂಟೇ?
ಕಯ್ಯಾರೆ ಖಡ್ಗಮಂ ಕೊಟ್ಟು
ತನ್ನರಸಿಯಂ ಹೊಯ್ ಎಂದು ಪೇಳದೆ
ಅಡವಿಗೆ ಕಳುಹಿ ಬಾ ಎಂದನೇ?—
ಅಯ್ಯಯ್ಯೊ, ರಾಘವಂ ಕಾರುಣ್ಯನಿಧಿಯಲ್ತೆ!

ಲಕ್ಷ್ಮಣ

ತಾಯೆ, ನಾಮೆಲ್ಲರಾಡಿದ ಮಾತಂ ಕಡೆಗೊತ್ತಿ
ತನ್ನ ಪಿಡಿದ ಛಲಮನೆ ಸಾಧಿಸಿ
ಎನ್ನನೀ ಕೆಲಸಕ್ಕೆ ನೂಂಕಿದಂ.

ಸೀತೆ

ಅಯ್ಯೋ,
ಬಿಟ್ಟನೇ ರಘುಶ್ರೇಷ್ಠನೆನ್ನಂ?

ತಾ ಮುಟ್ಟನೇ ?
ನೆಗಳ್ದ ಬಾಳ್ಕೆಗೆ ಸಂಚಕಾರಮಂ ಕೊಟ್ಟನೇ ?
ಓ ಸುಮಿತ್ರಾತನುಜ,
ಕಟ್ಟರಣ್ಯದೊಳ್ ಕಳುಹಿ ಬಾ ಎಂದು
ಕೊಟ್ಟನೇ ನಿನಗೆ ನಿರೂಪಮಂ ?
ಅಯ್ಯೋ, ನನ್ನ ಕಣ್ಬಟ್ಟೆಗೆಟ್ಟನೇ ?
ಇನಿಯನಂ ಅಗಲ್ದು
ಅಡವಿಯೊಳೆಂತು ಪಿಶಾಚದವೊಲಿಹೆನೊ ?
ಕೆಟ್ಟೆನೈ !—ಅಯ್ಯೋ ಕೆಟ್ಟೆನೈ !

ಲಕ್ಷ್ಮಣ

ತಾಯೇ....

ಸೀತೆ

ಹಾ ಪ್ರಾಣನಾಥ,
ಅಂದು
ಕೌಶಿಕಮುನಿಪನೊಡನೆ ಮಿಥಿಳಾಪುರಕೆ ಬಂದು
ಇದಕೆಂದೆ ಹರಧನುವಂ ಮುರಿದೆಯಾ ?
ಇದಕೆಂದೆ ಎನ್ನಂ ಮದುವೆಯಾದೆಯಾ ?—
ನಾನಗಲ್ದೊಡೆ ನವೆಯುತಿರ್ದೆ.—
ಅಯ್ಯೊ ಇದಕಾಗಿಯೇ ಕಪಿವೃಂದಮಂ ನೆರಪಿ
ಕಡಲಂ ಕಟ್ಟಿ ದೈತ್ಯರಂ ಕೊಂದೆಯಾ ?
ಅಗ್ನಿಮುಖದೊಳ್ ಪರೀಕ್ಷಿಸಿದೆನ್ನೊಳ್
ಅಪರಾಧಮಂ ಕಾಣಿಸಿದೆಯಾ ?

ಲಕ್ಷ್ಮಣ

ತಾಯೆ, ಸೈರಿಸು, ಶ್ರೀರಾಮಂ ಕಾವಂ.

ಸೀತೆ

ಕಾವಂ ! ಕಾವಂ !
ಓ ಲಕ್ಷ್ಮಣಾ, ನೀನಂದು

ಕಲ್ಲುಮುಳ್ಳಿಡಿದ ಕಾಡೊಳೆನ್ನನುಪಚರಿಸಿದೆ ;
ಪಲ್ಮಸೆದು ಗರ್ಜಿಪ ವಿರಾಧನಂ ಮರ್ದಿಸಿದೆ ;
ಬಲ್ಮೆಯಿಂ ನಾಂ ಕಳುಹಿದೊಡೆ ಜನಸ್ಥಾನದಿಂ
ಪೋದೆ ರಾಘವನ ಬಳಿಗೆ.
ಆ ನಿನ್ನ ನಲ್ಮೆಯುಂ ಮರೆದಪೆನೆ, ಸೌಮಿತ್ರಿ ?
ನೀನೆಲ್ಲರೊಳ್ ಮೈದುನನೆ ಎನಗೆ ?
ನಿನಗೆ
ಕಾನನದೊಳೆನ್ನಂ ನಿಲಿಸೆ ಮನಂ ಬಂದುದೇ, ತಂದೆ ?

ಲಕ್ಷ್ಮಣ

ಜನನೀ, ಮುಂದೆ ನಾನೇನಂ ಗೈಯಲಿ ?
ನೀಮೆ ಪೆಸಸಿಂ.
ನಿಮ್ಮಂ ಬಿಟ್ಟು ಪೋಗಲಾರೆಂ ;
ಪೋಗದೀಯವಸ್ಥೆಯೊಳಿರ್ದೊಡೆ
ಅಣ್ಣನೇಗೈದಪನೊ ? (ರೋದಿಸುತ್ತಾನೆ)

ಸೀತೆ

ತಂದೆ, ಲಕ್ಷ್ಮಣಾ,
ನಿನ್ನೊಳಾಡಿದೊಡೇನಹುದು ?
ನೀನಂದು ಜನಸ್ಥಾನದಿಂ ಪೋಗಿ
ಎನ್ನಂ ರಕ್ಕಸನಿಗಿತ್ತಂತೆ
ಇಂದುಂ ಕಾಡಿಗೆನ್ನಂ ಕೊಟ್ಟು ಪೋಗು.—
ಅಯ್ಯೋ, ಕೊಂದು ಕೊಂಬೆನೇ ?
ಈ ಜೆಂದೊಡಲೊಳಿದೆ ಬಸಿರ ದಂದುಗಂ !
ಕಾಡಿನೊಳ್ ಬಂದುದಂ ಕಾಣ್ಬೆನಾಂ ;
ಇದೋ ಕೌಸಲೆಯಡಿಗೆ ವಂದಿಪೆಂ.
ಅಪರಾಧಮೊಂದುಮಿಲ್ಲದೆ
ತನ್ನ ಕಂದನೆನ್ನಂ ತೊರೆದುದಂ ದೇವಿಗೊರೆ.

ಲಕ್ಷ್ಮಣ

ಓ ಬನವೇ,
ಎನ್ನಂ ನುಂಗಿಕೊಳಲಾರೆಯೇಂ ?
ಓ ಬಾಂದೊರೆಯೇ,
ನೀನೆನ್ನಂ ಮುಳುಗಿಸಲಾರೆಯೇಂ ?
ಈ ಪಾಪಿಯನಾರೊಳಕೊಳ್ವರ್ ?
ಓ ಲಕ್ಷ್ಮಣಾ,
ನಿನಗೆ ನರಕದೊಳುಂ ಎಡೆಯಿಲ್ಲ !—
ಮಾಳ್ಕೆಯಿನ್ನಾವುದು ?
ಇಬ್ಬಗಿಯಾಗೀ ಪಾಳೊಡಲಂ ಸೀಳ್ಕಿಡಹಬೇಡವೆ ?
ಅಯ್ಯೋ, ಸುಡಲಿ ಈ ನಿಷ್ಠುರದ ಬಾಳ್ಕೆಯಂ !

ಸೀತೆ

ಏಕೆ ನಿಂದಿಹೆ ? ಪೋಗು, ಸೌಮಿತ್ರಿ.
ಕೋಪಿಸನೆ ಶ್ರೀರಾಮಚಂದ್ರಂ ನೀನಿಲ್ಲಿ ತಳುವಿದಡೆ ?
ಏಕೆನ್ನಂ ನೋಡುತಿಹೆ ?
ನೆರವುಂಟು ಎನಗೀ ಕಾಡೊಳುಗ್ರಜಂತುಗಳಲ್ಲಿ !
ಪಾಪ,
ಆ ರಘುನಾಥನೇಕಾಕಿಯಾಗಿರ್ಪನಲ್ತೆ ?
ಅಯ್ಯೊ ಲೋಕದರಸೇಗೈದೊಡಂ
ತನ್ನ ಕಿಂಕರರ್ ಬೇಕುಬೇಡೆಂದು ಪೇಳರೆ ?
ಭರತ ಶತ್ರುಘ್ನರೀ ಕೆಲಸಕೊಪ್ಪಿದರೆ ?
ಹನುಮಂತನಿರ್ದಪನೆ ?

ಲಕ್ಷ್ಮಣ

ಭರತ ಶತ್ರುಘ್ನರೊಪ್ಪಿಗೆಯಿಲ್ಲ.
ಹನುಮಂತ ಜಾಂಬವ ಸುಗ್ರೀವರಾರುಂ
ಇದನರಿಯರಾ ?

ಸೀತೆ

ಬಿಡು, ಬಿಡು, ಲಕ್ಷ್ಮಣಾ,
ಆರಿರ್ದೊಡೇಗೈವರ್ ?
ಇದು ತನ್ನ ಘರುಳಾಟಂ !—
ಆ ರಾವಣನ ತಮ್ಮನೈಸಲೆ ವಿಭೀಷಣಂ ?
ಆತಂ ಭೀರುಗಳನರಿದಪನೆ ?
ಸೋದರಂಗುರೆ ಮುಳಿದ ಸುಗ್ರೀವನೆಂಬವಂಗೆ
ಕಾರುಣ್ಯಮಿರ್ದಪುದೆ ?
ಮತ್ತುಳಿದ ಮಂತ್ರಿಗಳಾದಾರುಂಟು
ದೇವಂಗೆ ಪೇಳುವರ್ ?
ನೀನೆ
ಒಪ್ಪಿ ಘೋರಾಟವಿಗೆ ಕೊಂಡುಬಂದೆ ।
ಇನ್ನೊರಲ್ದೊಡೇನಹುದು ?

ಲಕ್ಷ್ಮಣ

(ಕಿವಿಮುಚ್ಚಿ ಶೋಕಿಸಿ)

ಮಾತೆ,
ಓ ಎನ್ನ ಮಾತೆ,
ಓ ಜಗನ್ಮಾತೆ,
ನಿಷ್ಕರುಣಿಯಂ
ಕುಲಘಾತುಕನಂ
ದುಷ್ಟನಂ
ಚಂಡಾಲನಂ ಉದ್ಧರಿಸೌ ! (ದೊಪ್ಪನೆ ಕೆಡೆದು ನಮಿಸುತ್ತಾನೆ)

ಸೀತೆ

(ಸಂತೈಸಿ ಎತ್ತಿ)

ಏಳೇಳು, ಕಂದಾ !
ಕೈಹಿಡಿದ ನಲ್ಲನೇ ಪೇಸಿ ಬಿಸುಟ್ಟರೆ

ಇನ್ನಾರೇನು ಮಾಡುವರು ?
ನಿನ್ನೊಳೇನಪರಾಧಂ ?—
ಕರುಣಾಳು ರಾಘವನೊಳುಂ ತಪ್ಪಿಲ್ಲ :
ಕಡುಘಾತಕಂಗೈದು ಪೆಣ್ಣಾಗಿ ಸಂಭವಿಸಿದೊಡಲಂ,
ಈ ಪಾಳೊಡಲಂ, ಪೊರೆವುದೆನ್ನಪರಾಧಂ !
ನೀಸಿರಲ್ ಬೇಡ, ನಡೆ, ಪೋಗು ;
ನಿಲ್ಲದಿರ್ !
ನಿನ್ನಣ್ಣಂ ಕೇಳ್ದೊಡೆ
"ನಿನ್ನಾಣತಿಗಬಲೆ ಮರುಗಿದಳಿಲ್ಲ ;
ಕಣ್ಣೀರ್ಗರೆದಳಿಲ್ಲ ;
ಮುನಿಸಾಂತಳಿಲ್ಲ ;
ಬೆರ್ಚಿದಳಿಲ್ಲ !
ನೀನೆ ಗತಿಯೆಂದು ನಿನ್ನಡಿಯಂ ನೆನೆಯುತೆ
ಕಡೆವೊತ್ತಂ ಪಾರುತಿರ್ಪಳ್"
ಎಂದು ಬಿನ್ನವಿಸರ್ !
ಅತ್ತೆವಿರ್ಗಿಂತೊರೆ :
ನಿಮ್ಮಾಶೀರ್ವಾದಮಂ ಪಡೆಯದೆ ಬಂದುದರಿಂ
ಎನಗೀ ಗತಿಯಾದುದು ಎಂದು.
ಊರ್ಮಿಳೆಗೆ ಪೇಳಿಂತು :
ನಿಮ್ಮೊಳಾಲೋಚಿಸದೆ ಬಂದ ತಪ್ಪಂ ಮನ್ನಿಸಿ,
ಎನ್ನನಾವಗಂ ಮರೆಯಲಾಗದು ಎಂದು !—
ಎನ್ನುಡುಗೆ ತೊಡುಗೆಯಂ ದಾಸಿಯರ್ಗೆ ಪಚ್ಚುಗುಡಯ್ !
ನಿನಗೆನ್ನೊಳ್ ದಯೆಯಿರ್ಪೊಡೆ
ಲೋಗರನುವಿಂಗೊಂದು ದಮ್ಮಾಣಿಯನೇರ್ಪಡಿಸಯ್ !
ಎನಗೆ ಬಳುವಳಿ ಬಂದಾವಿನ
ತಬ್ಬಲಿ ಏಳಗರುವಂ
ಬಡವಾಗದಂತೆ ನೋಡಿಕೊಳ್ವುದೆಂದು
ನಿನ್ನಿನಿಯಳ್ಗೆ ಪೇಳಯ್ !

ಊರ್ಮಿಳೆಗೆ ಕಿರುಗೂಸೊಂದು ಪುಟ್ಟಿದಂದು
ಆದಕ್ಕೆನ್ನಾಶೀರ್ವಾದಮಿರಲಿ! (ಲಕ್ಷ್ಮಣ ನೋಯುತ್ತಾನೆ)
ನೀನಿನ್ನು ಹೊರಡು ;
ನಿನಗೆ ಮಾರ್ಗದೊಳಾಗಲಡಿಗಡಿಗೆ ಸುಖಂ !
ಪಯಣಂ ಸೊಗಮಕ್ಕೆ !
ಶ್ರೀರಾಮನಡಿದಾವರೆಯೊಲ್ಮೆಯೊಂದು ವಜ್ರಪಂಜರಮಕ್ಕೆ !

ಲಕ್ಷ್ಮಣ

(ಕೈಮುಗಿದುಕೊಂಡು)

ಎಲೆ ವನಸ್ಥಳಗಳಿರ, ವೃಕ್ಷಂಗಳಿರ, ಮೃಗಂಗಳಿರಾ,
ಕ್ರಿಮಿಕೀಟಂಗಳಿರ, ಲತೆಗಳಿರಾ,
ಪಂಚಭೂತಂಗಳಿರ, ದೆಸೆಗಳಿರಾ ಕಾಪುದು !
ಎಲೆ ಧರ್ಮದೇವತೆಯೆ,
ಜಗಜ್ಜನನಿ ಜಾಹ್ನವಿಯೆ,
ಎನ್ನ ಮಾತೆಯಂ ಜಾನಕಿಯಂ ಸಲಹಿಕೊಳ್ವುದು !
ಎಲೆ ತಾಯೆ, ಭೂದೇವಿ,
ನಿನ್ನ ಮಗಳಿಹಳು, ಸಂರಕ್ಷಿಸಾ !

(ಸೀತೆಯನ್ನು ಬಲನಂದು ತುಸುಮೂರ ನಿಲ್ಲುತ್ತಾನೆ)

ಸೀತೆ

ಏಕೆ ನಿಂದಿಹೆ ? ನಡೆ, ಸೌಮಿತ್ರಿ !

ಲಕ್ಷ್ಮಣ

ತಾಯೆ, ನಿನ್ನನೆಂತು
ಈ ಘೋರ ವಿಪಿನದೊಳುಳಿದು ಪೋಗಲಿ ?
ಶ್ರೀರಾಮನಾಜ್ಞೆಯನೆಂತು ಪಾಲಿಸಲಿ ?

ಸೀತೆ

ಮೈದುನಾ,
ರಾಘವನಾಜ್ಞೆಯಂ ಮೀರದಿರು, ನಡೆ.

ಸೀತೆಗಿಂ ರಾಮನಾಣತಿ ಮಿಗಿಲಲ್ತೆ ?
ಶ್ರೀರಾಮನಾಜ್ಞೆಯಂ ಪಾಲಿಸಿಹೆ !
ಇಗೋ ಎನ್ನಾಜ್ಞೆಯಂ ಪಾಲಿಸು :
ನಡೆ ; ನಿನಗೆನ್ನಾಶೀರ್ವಾದಂ !
[ಲಕ್ಷ್ಮಣನು ಕೈಮುಗಿದು ಮನಸ್ಸಿಲ್ಲದ ಮನಸ್ಸಿನಿಂದ ಹೋಗುತ್ತಾನೆ.]
ಅಯ್ಯೋ,
ಮಿಥಿಲೇಂದ್ರ ವಂಶದೊಳ್ ಜನಿಸಿ
ರಘುಕುಲದ ದಶರಥನೃಪನ ಸೊಸೆಯಾಗಿ
ಎನಗೆ ಕಟ್ಟಡವಿಯೊಳ್ ವ್ಯಥಿಸುವಂತಾಯ್ತೆ ?—
ಹಾ ವಿಧಿಯೆ !
ಹರಣಮಂ ತೊರೆದಪೆನೆ ?
ಬರ್ಪುದು ಭ್ರೂಣಹತ್ಯಾದೋಷಂ !—
ಎನ್ನ ನೋವೆನಗಾರೆಯಲಿ !—
ಲೋಕದೈಶ್ವರ್ಯಂ ಸುಖಮೆಲ್ಲಂ ನಶ್ವರಂ !
ಶ್ರೀರಾಮನೊಲ್ಮೆಯೊಂದೆ ಶಾಶ್ವತಂ !
ಆತನ ನಾಮಸ್ಮರಣೆಯೆ ಎನಗೆ ದಿಕ್ಕು :
ಹೇ ಕಲ್ಯಾಣರೂಪ, ನೀನೆನ್ನಂ ಕೈಬಿಡದಿರ್ಪೈ !
ದೆಸೆಗೆಟ್ಟೆನ್ನಂ ಮರೆಯದಿರ್ಪೈ !
ಹೇ ಕರುಣಾಕರ, ಪೆಣ್ಣೆನ್ನೊಳ್ ಕರುಣೆಯಿರಲ್ಕೆ !
ರಾಮಾ ! ರಾಮಾ ! ರಾಮಾ !....

[ವಾಲ್ಮೀಕಿ ಮಹರ್ಷಿ ಮೆಲ್ಲಮೆಲ್ಲನೆ ಹುಡುಕುನೋಟದಿಂದ ಆಲಿಸುತ್ತ ಪ್ರವೇಶಿಸುತ್ತಾನೆ]

ವಾಲ್ಮೀಕಿ

ಮುಖಕೆ ಯೂಪವನರಸುತಿರೆ
ಆರ್ತನಾದಂ ಕೇಳ್ದುದಲ್ತೆ ?—
ಬನವೆಲ್ಲಂ ಮರುಗಿದುದು ಆ ನಾದಂಗೇಳ್ದು !

ಎನ್ನೆರ್ದೆಯೊಳುಂ ಚಿಮ್ಮಿದುದು
ಆವುದೋ ಪೊಸತೊಂದಲೌಕಿಕಾವೇಶಂ !—
ಆ ದನಿ
ಸ್ವರ್ಗಮರ್ತ್ಯಂಗಳಂ ವನಗಿರಿಗಳಂ
ಮೇಘಮಂಡಲಮುಮಂ ತುಂಬಿ
ಎನ್ನೆರ್ದೆಯೊಳ್ ಅನುರಣಿತಮಾದುದಲ್ತೆ ?—(ಮೆಲ್ಲಗೆ)
ರಾಮಾ ! ರಾಮಾ ! ರಾಮಾ ! ಎಂಬಾ ಸವಿದನಿ ?
ಅದೆನ್ನ ನಚ್ಚಿನ ಮಹಾಮಂತ್ರಂ !
ವ್ಯಾಧನಾಗಿರ್ದೆನಗೆ ಮಹರ್ಷಿತ್ವಮಂ ಕೃಪೆಗೈದ
ಮಹಾಮಂತ್ರಂ !—(ಮೆಲ್ಲಗೆ)
ರಾಮಾ ! ರಾಮಾ ! ರಾಮಾ !
ಆ ಎರಡಕ್ಷರಂಗಳೆನಗೆ ಸಂಕ್ಷಿಪ್ತ ಬ್ರಹ್ಮಾಂಡಂ !
ಸೂರ್ಯೋದಯಂ, ಚಂದ್ರೋದಯಂ,
ಹಿಮವತ್ಪರ್ವತಂ, ವೇದಕಾವ್ಯಂಗಳೆಲ್ಲಂ,
ಗಂಗೆ ಮೊದಲಪ್ಪ ಪುಣ್ಯತೀರ್ಥಂಗಳುಂ,
ಎನ್ನ ಜೀವನದ ಎಲ್ಲ ಅನುಭವಂಗಳುಂ,
ಆ ದಿವ್ಯನಾಮದ ರಸಮಣಿಯ ಹೃದ್ದೇಶದೊಳೆ
ಕಬ್ಬಿಗನ ಬಗೆಯ ಕಬ್ಬದವೋಲಡಗಿರ್ಕುಂ !—
ರಾಮಾ ! ರಾಮಾ ! ರಾಮಾ ! ಎಂದೊರೆದುದಲ್ತೆ ?
ಸ್ತ್ರೀವಾಣಿಯಂತಿರ್ದುದು !—(ಆಲೋಚಿಸಿ)
ಎನ್ನ ಶಿಷ್ಯರಾರುಂ ಈ ದಿಕ್ಕಿಗೈತರಲಿಲ್ಲ !

ಸೀತೆ

(ಮೆಲ್ಲಗೆ)

ರಾಮಾ ! ರಾಮಾ !

ವಾಲ್ಮೀಕಿ

(ಬೆಚ್ಚಿನೋಡಿ)

ಈ ಎಡೆಯೊಳಾರೋ ರೋದಿಸುತಿರ್ಪರ್.
ಆರೀಕೆ ?

ಗ್ರೀಷ್ಮರುತುವಿಂ ನವೆದ ಕಾಂತಾರದಧಿದೇವಿಯಂತಿರ್ಪಳ್ !
ಆರೋ ನಾಗರಿಕ ಸ್ತ್ರೀ ! (ಹತ್ತಿರ ಬರುತ್ತ)
ಎಲೆ ತಾಯಿ, ನೀನಾವಳೌ ?
ಕಂಡ ಕುರುಪಾಗಿರ್ಪುದು !
ಅಕಟಾ,
ಈ ಘೋರತರ ಗಹನಕೊರ್ವಳೆ ಎಂತು ಬಂದೆ ?

ಸೀತೆ

(ಬೆಚ್ಚಿ)

ಎನ್ನಾಣೆ ! ಶ್ರೀರಾಮನಾಣೆ !
ಪತ್ತೆ ಸಾರದಿರ್, ಸಾರದಿರ್ !

ವಾಲ್ಮೀಕಿ

ತಾಯೆ, ಬೆದರಬೇಡ.
ನಾಂ ಅನ್ಯರಲ್ತು : ತವಸಿಗಳ್ !
ಈ ಎಡೆಯ ಆಶ್ರಮದೊಳೆ ಇರ್ಪೆವು.

ಸೀತೆ

ಅಯ್ಯೋ ಬಳಿಸಾರದಿರ್.
ರಾವಣನೀ ವೇಷದೊಳೆ ಮುನ್ನಮೊಯ್ದಂ !
ಶ್ರೀರಾಮನಾಣೆ ! ದೂರಸರಿ !

ವಾಲ್ಮೀಕಿ

ದೇವಿ,
ಶ್ರೀರಾಮಚಂದ್ರಮನಾಣೆ ! ಎನ್ನಾಣೆ !
ನಾಂ ಕವಡುದವಸಿಯಲ್ತು ;
ವಾಲ್ಮೀಕಿ ನಾಂ !
ಭೂರಿ ಶೋಕಾರ್ತರಾಗಿರ್ದರಂ ಕಂಡು
ಸುಮ್ಮನೆ ಪೋಪನಲ್ಲ.

ಸೀತೆ

(ಹರ್ಷ ಶೋಕ ಲಜ್ಜೆಗಳಿಂದ)

ಓ ಕವೀಶ್ವರಾ,
ನಾಂ ಜನಕರಾಜಂಗೆ ಮಗಳ್;
ದಶರಥಮಹಾರಾಜಂಗೆ ಸೊಸೆ;
ಶ್ರೀರಾಮಚಂದ್ರಂಗೆ ಪಟ್ಟದರಸಿ!
ಲೋಕಾಪವಾದಕೆ ಬೆದರಿ ಅಪರಾಧಿಯಲ್ಲದೆನ್ನಂ
ತರಣಿಕುಲ ಸಂಭವಂ ಬಿಟ್ಟನೆಂದು
ಈ ವನದೊಳಿರಿಸಿ ಪೋದಂ ಸುಮಿತ್ರಾತ್ಮಜಂ!—
ಜೀವನಂ ತೊರೆವೆನೆಂಬೆನೆ
ಬಸಿರೊಳಿಹುದಕ್ಕರೆಯ ಪೊರೆ!—
ತಂದೆ, ಎನಗೆ ಬಟ್ಟೆದೋರ್ಪೈ! (ಕೈ ಮುಗಿಯುತ್ತಾಳೆ)

ವಾಲ್ಮೀಕಿ

ದೇವಿ, ಬಿಡು ಶೋಕಮಂ:
ಪುತ್ರಯುಗಮಂ ಪಡೆವೆ.
ಭಾವಿಸದಿರಿನ್ನು ಸಂದೇಹಮಂ.
ಜನಕಂಗೆ ನಾವನ್ಯರಲ್ಲ!
ನಮ್ಮಾಶ್ರಮಕೆ ಬಂದು ನೀಂ ಸುಖದೊಳಿರ್ದೊಡೆ
ಆವಾವ ಬಯಕೆಯುಂಟೆಲ್ಲಮಂ ಸಲಿಸಿ
ನಿನ್ನಂ ನಾನೋವಿಕೊಂಡಿರ್ಪೆಂ.
ಅಂಜದಿರು, ಬಾ ನನ್ನೊಡನೆ!

ಸೀತೆ

ತಂದೆ,
ನಿಮ್ಮಂ ನಾಂ ಮೊದಲೆ ಕೇಳಿಬಲ್ಲೆಂ.
ಅರಿಯದೆಯೆ ಸಂದೇಹಪಟ್ಟುದಂ ಮನ್ನಿಸೈ!
(ಬಿದ್ದು ನಮಸ್ಕರಿಸುತ್ತಾಳೆ)

		ಉತ್ತಮ	ಸಾದಾ
೩೩.	ರಸೋ ವೈ ಸಃ (ಕಾವ್ಯ ಮೀಮಾಂಸೆ)	೮.೦೦	೫.೦೦
೩೪.	ಪಾಂಚಜನ್ಯ	—	೫.೦೦
೩೫.	ನಿರಂಕುಶಮತಿಗಳಾಗಿ	—	೨.೦೦
೩೬.	ಕೃತ್ತಿಕೆ (ಸಾನೆಟ್ಟುಗಳು)	—	೫.೦೦
೩೭.	ನನ್ನ ದೇವರು ಮತ್ತು ಇತರ ಕಥೆಗಳು	—	೪.೦೦
೩೮.	ಚಂದ್ರಹಾ[illegible]	—	೫.೦೦
೩೯.	ಅನಿಕೇತನ [illegible]		೫.೦೦
೪೦.	ಜೇನಾಗುವ [illegible]		೫.೦೦
೪೧.	ಕಿಂಕಿ[illegible]		೪.೦೦
೪೨.	ಷಷ್ಠಿ[illegible]		[illegible]೦.೦೦
೪೩.	ಷೋ[illegible]		[illegible].೦೦
೪೪.	ಅನ[illegible]		[illegible].೦೦
೪೫.	ಬಲ[illegible]		[illegible].೦೦
೪೬.	ಮೊ[illegible]		[illegible].೬೦
೪೭.	ಮ[illegible]		[illegible].೦೦
೪೮.	ನನ[illegible]		[illegible].೦೦
೪೯.	ಮ[illegible]		[illegible].೫೦
೫೦.	ಮ[illegible]		೨.೫೦
೫೧.	ಮ[illegible]		—
೫೨.	ಕು[illegible]		೬.೦೦
೫೩.	ಪ್ರ[illegible]		೫.೦೦
೫೪.	ಕ[illegible]		೫.೦೦
೫೫.	ಅ[illegible]		೦.೭೫
೫೬.	ಪ[illegible]		೪.೦೦
೫೭.	ಇ[illegible]		೩.೦೦
೫೮.	ಸಾ[illegible]		೪.೭೫
೫೯.	ಪ[illegible]		೪.೦೦
೬೦.	ಕಬ್ಬ[illegible]		೪.೦೦
೬೧.	ಕಾ[illegible]		೨.೫೦
೬೨.	ವಿ[illegible]		೪.೦೦
೬೩.	ಹೊ[illegible]		೩.೦೦
೬೪.	ನರಿ[illegible]		೧.೦೦
೬೫.	ಕೊ[illegible]		೫.೦೦
೬೬.	ನೆನ[illegible]		[illegible]೦.೦೦

ಉದಯರವಿ ಪ್ರಕಾಶನ : ಕುವೆಂಪು ಕೃತಿಗಳು

		ಉತ್ತಮ	ಸಾಧಾ
೧.	ಶ್ರೀರಾಮಾಯಣ ದರ್ಶನಂ (ಮಹಾಕಾವ್ಯ) ...	ಪ್ರಸಾರಾಂಗದಲ್ಲಿ	
೨.	ವಿಭೂತಿಪೂಜೆ (ವಿಮರ್ಶೆ)	—	೪.೫೦
೩.	ರಕ್ತಾಕ್ಷಿ (ನಾಟಕ)	—	೩.೫೦
೪.	ಬೆರಳ್‌ಗೆ ಕೊರಳ್ (ನಾಟಕ)	—	೩.೦೦
೫.	ಕಾವ್ಯವಿಹಾರ (ವಿಮರ್ಶೆ)	—	೫.೦೦
೬.	ಚಂದ್ರಮಂಚಕೆ ಬಾ, ಚಕೋರಿ (ಪ್ರೇಮ ಗೀತೆಗಳು)	—	೫.೦೦
೭.	ಪ್ರೇಮಕಾಶ್ಮೀರ (ಪ್ರೇಮ ಗೀತೆಗಳು)	—	೫.೦೦
೮.	ಸಂನ್ಯಾಸಿ ಮತ್ತು ಇತರ ಕತೆಗಳು	—	[illegible]
೯.	ಕಾನೂರು ಹೆಗ್ಗಡಿತಿ (ಮಹಾ ಕಾದಂಬರಿ) ...	೩೦.೦೦	—
೧೦.	ಕೋಗಿಲೆ ಮತ್ತು ಸೋವಿಯೆಟ್ ರಷ್ಯ (ಕ್ರಾಂತಿ ಕವನಗಳು)	—	[illegible]
೧೧.	ಪಕ್ಷಿಕಾಶಿ (ಪ್ರಕೃತಿ ಕವನಗಳು)	—	೭.೫೦
೧೨.	ಅಗ್ನಿಹಂಸ (ದರ್ಶನ ಕವನಗಳು)	—	೫.೦೦
೧೩.	ಬಿರುಗಾಳಿ (ನಾಟಕ)	—	೭.೦೦
೧೪.	ಚಿತ್ರಾಂಗದ (ಕಾವ್ಯ)	೧೦.೦೦	೫.೦೦
೧೫.	ಇಕ್ಷುಗಂಗೋತ್ರಿ (ಸ್ವಾತಂತ್ರ್ಯೋದಯ ಕವನಗಳು)	—	೪.೦೦
೧೬.	ಸಾಹಿತ್ಯ ಪ್ರಚಾರ (ವಿಮರ್ಶೆಯ ಭಾಷಣಗಳು) ...	—	೫.೦೦
೧೭.	ನವಿಲು (ಪ್ರಕೃತಿ ಕವನಗಳು)	—	೫.೦೦
೧೮.	ಕಥನ ಕವನಗಳು	—	೫.೦೦
೧೯.	ಕೊಳಲು (ಕವನಗಳು)	—	೫.೦೦
೨೦.	ಯಮುನ ಸೋಲು (ನಾಟಕ)	—	೨.೫೦
೨೧.	ನನ್ನ ಗೋಪಾಲ (ಮಕ್ಕಳ ನಾಟಕ)	—	೨.೫೦
೨೨.	ತಪೋನಂದನ (ವಿಮರ್ಶೆ)	—	೫.೦೦
೨೩.	ದ್ರೌಪದಿಯ ಶ್ರೀಮುಡಿ (ವಿಮರ್ಶೆ)	—	೫.೦೦
೨೪.	ಮಲೆನಾಡಿನ ಚಿತ್ರಗಳು	೧೬.೦೦	೫.೦೦
೨೫.	ವಾಲ್ಮೀಕಿಯ ಭಾಗ್ಯ (ನಾಟಕ)	—	೪.೫೦
೨೬.	ಬೊಮ್ಮನಹಳ್ಳಿಯ ಕಿಂದರಿಜೋಗಿ	—	೧.೫೦
೨೭.	ಶ್ಮಶಾನ ಕುರುಕ್ಷೇತ್ರಂ (ನಾಟಕ)	—	೩.೫೦
೨೮.	ಮಹಾರಾತ್ರಿ (ನಾಟಕ)	—	೧.೫೦
೨೯.	ಜಲಗಾರ (ನಾಟಕ)	—	೨.೫೦
೩೦.	ಹಾಳೂರು (ಕವಿತೆ)	—	೧.೦೦
೩೧.	ಶೂದ್ರ ತಪಸ್ವಿ (ನಾಟಕ)	—	೩.೦೦
೩೨.	ಕಲಾಸುಂದರಿ (ಕವನಗಳು)	—	೫.೦೦

[ಹಿಂಬದಿ ನೋಡಿ]